# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:-** ಶ್ರೀ ಕೆ.ಕೃಷ್ಣಮೂರ್ತಿ, ಹಿಂದಿನ ಕಾರ್ಯನಿರ್ವಾಹಕ ಅಧಿಕಾರಿ ತಾಲ್ಲೂಕು ಪಂಚಾಯತ್ ರಾಣೆಬೆನ್ನೂರು, ಮತ್ತಿತರರ ವಿರುದ್ಧ ಇಲಾಖಾ ವಿಚಾರಣೆಯನ್ನು ನಡೆಸಲು ಪ್ರಕರಣವನ್ನು ಮಾನ್ಯ ಉಪಲೋಕಾಯುಕ್ತರವರಿಗೆ ವಹಿಸುವ ಕುರಿತು.

**ಓದಲಾಗಿದೆ:** 1. ಮಾನ್ಯ ಉಪಲೋಕಾಯುಕ್ತರು, ಇವರು ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 12(3) ರಡಿ ಸಲ್ಲಿಸಿರುವ ವರದಿಸಂಖ್ಯೆ:ಕಂಪ್ಲೇಂಟ್/ಉಪಲೋಕ್/ಬಿಜಿಎಮ್/3929/2015/ಎಆರ್ಎಲ್ಒ-1, ದಿನಾಂಕ: 22.03.2016.

2. ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಇವರ ಅ.ಸ.ಪತ್ರ ಸಂಖ್ಯೆ:ಕಂಪ್ಲೇಂಟ್/ಉಪಲೋಕ್/ಬಿಜಿಎಮ್/3929/2015/ಎಆರ್ಎಲ್ಒ-1, ದಿನಾಂಕ: 23.03.2016.

****

**ಪ್ರಸ್ತಾವನೆ:**

ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಇವರು ಮೇಲೆ ಓದಲಾದ(2)ರಲ್ಲಿ ಓದಲಾದ ಪತ್ರದೊಂದಿಗೆ, ಕರ್ನಾಟಕ ಲೋಕಾಯುಕ್ತ ಕಾಯ್ದೆ, 1984ರ ಕಲಂ 12(3) ರಡಿಯಲ್ಲಿ ಮಾನ್ಯ ಉಪಲೋಕಾಯುಕ್ತರವರು ಮೇಲೆ(1) ರಲ್ಲಿ ಓದಲಾದಂತೆ ನೀಡಿರುವ ವರದಿ ಹಾಗೂ ಇತರ ದಾಖಲೆಗಳನ್ನು ಸರ್ಕಾರಕ್ಕೆ ಕಳುಹಿಸಿ, ಸದರಿ ವರದಿಯಲ್ಲಿನ ಶಿಫಾರಸ್ಸಿನಂತೆ ಕ್ರಮ ಕೈಗೊಂಡು, ಕೈಗೊಂಡ ಕ್ರಮದ ಬಗ್ಗೆ ತಿಳಿಸುವಂತೆ ಕೋರಿರುತ್ತಾರೆ.

ಮಾನ್ಯ ಉಪಲೋಕಾಯುಕ್ತರವರ ವರದಿ ಹಾಗೂ ಇತರೆ ದಾಖಲೆಗಳನ್ನು ಸರ್ಕಾರವು ಪರಿಶೀಲಿಸಿದೆ. ಹಾವೇರಿ ಜಿಲ್ಲೆಯ ರಾಣೆಬೆನ್ನೂರು ತಾಲ್ಲೂಕಿನ ಬೇಲೂರು ಗ್ರಾಮ ಪಂಚಾಯತಿ ವ್ಯಾಪ್ತಿಯ ಉದಗಟ್ಟಿ ಗ್ರಾಮದ ಶ್ರೀ ದುರ್ಗಾಂಬ ದೇವಸ್ಥಾನದಿಂದ ಬೇಲೂರು ಮುಖ್ಯರಸ್ತೆಯವರೆಗೆ ಮತ್ತು ಚೌಡಪ್ಪ ಬರ್ಕಿ, ರಿಕ್‌ಯಾರ್ಡ್‌ಯಿಂದ ಶ್ರೀ ನೀಲಪ್ಪ ಕುನಬೇವು, ಇವರ ಜಮೀನಿನವರೆವಿಗೂ, ನರೇಗಾ ಯೋಜನೆಯಡಿ ಕೈಗೊಳ್ಳಲಾದ ರಸ್ತೆ ಕಾಮಗಾರಿಗಳಲ್ಲಿ ಮುಖ್ಯ ಕೂಲಿಗಾರರಾಗಿ ಕರ್ತವ್ಯ ನಿರ್ವಹಿಸಿದ, ಉದಗಟ್ಟಿ ಗ್ರಾಮದ ನಿವಾಸಿಯಾದ ಶ್ರೀ ಕೊಟ್ರೇಶ್, ಕುದ್ರಿಹಾಳ ತಂದೆ ಬಸಪ್ಪ, ಇವರು ಕೂಲಿ ಮೊತ್ತವನ್ನು ಮತ್ತು ಸಾಮಗ್ರಿ ಮೊತ್ತವನ್ನು ಬಿಡುಗಡೆ ಮಾಡಲು, ರಾಣೆಬೆನ್ನೂರು ತಾಲ್ಲೂಕು ಪಂಚಾಯತ್‌ನ ಕಾರ್ಯನಿರ್ವಾಹಕ ಅಧಿಕಾರಿಯಾದ ಶ್ರೀ ಕೆ.ಕೃಷ್ಣಮೂರ್ತಿ, ಮತ್ತು ಶ್ರೀ ವಿಶ್ವನಾಥ್ ಡಿ. ಅನ್ವೇರ, ಪಂಚಾಯತ ಅಭಿವೃದ್ಧಿ ಅಧಿಕಾರಿ, ಬೇಲೂರು ಗ್ರಾಮ ಪಂಚಾಯತಿ ಇವರುಗಳು ಲಂಚಕ್ಕೆ ಬೇಡಿಕೆಯಿಟ್ಟಿರುವುದಾಗಿ, ಹಾವೇರಿ ಜಿಲ್ಲಾ ಲೋಕಯುಕ್ತ ಸಂಸ್ಥೆಯ ಪೋಲಿಸ್ ಠಾಣೆಗೆ ನೀಡಿದ್ದ ದೂರನ್ನು ಮೊಕದ್ದಮೆ ಸಂಖ್ಯೆ: ಸಿಆರ್ ನಂ.12/2014 ರನ್ವಾಗಿ ದಾಖಲಿಸಿಕೊಂಡು, ನೀಡಿದ್ದ ವರದಿಯನ್ವಯ ಪ್ರಕರಣವನ್ನು ಸ್ವಯಂ ಪ್ರೇರಿತವಾಗಿ ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 7(2) ರನ್ವಯ ತನಿಖೆಯನ್ನು ಕೈಗೆತ್ತಿಕೊಳ್ಳಲಾಗಿರುತ್ತದೆಂದು ಮತ್ತು **ತನಿಖೆಯಲ್ಲಿ ಈ ಕೆಳಕಂಡ ಅಂಶಗಳು ಕಂಡು ಬಂದಿರುತ್ತವೆ** ಮಾನ್ಯ ಉಪಲೋಕಾಯುಕ್ತರು-1 ತಮ್ಮ ವರದಿಯಲ್ಲಿ ನಮೂದಿಸಿರುತ್ತಾರೆ.

a) The Complainant was working as a main coolie worker in respect of the road works from Sri Durgamma temple of Udhagatti village till Belur main road and from the Rick yard of Chowdapp Barki till the land of Sri Neelappa Kunabevu under MGNREGA Scheme within the Jurisdiction of Belur Gram Panchayat of Ranebennur taluk. The said two works were completed under the leadership of the complainant by the coolie workers of his village. Even the complainant has supplied materials required for the execution of the aforesaid road works through one Sri.Srinivas Maidoor. Though, the complainant has given correct account numbers of the coolie workers, their coolie amount was not credited by respondent no.1 to the correct account numbers of coolie workers;

b) About one month prior to 22/09/14 respondent no.1 told complainant that, respondent no.2 is demanding bribe amount to release the coolie amount and material amount then the complainant gave bribe amount of Rs.10,000/- to respondent no.1 at Ranebennur, thereafter respondent no-1 gave the said amount to respondent no.2. Afterwards, respondent no.2 sanctioned bill amount of Rs. 1,90,000/-. The complainant informed respondent no.1 on 12/09/14 at about 4 pm., over phone to credit the coolie amount to the accounts of kuli workers and amount of the material supplied to the account of aforesaid Sri.Srinivas Maidoor, at that time respondent no.1 was present at Taluk Panchayat, Ranebennur.

c) When the complainant enquired respondent no.1 about coolie and material amounts, respondent no.1 informed the complainant that, respondent no.2 was asking bribe amount to sign. Later on, the complainant contacted respondent no.1 on the same day at about 8-9 pm., from his village and enquired about the aforesaid amount,

respondent no.1 told the complainant to pay bribe amount to respondent no.2 and the remaining amount may be given to respondent no.1. Later on, respondent no.1 told the complainant to pay total bribe amount of Rs. 50,000/- and asked the complainant to bring Rs. 15,000/- to Rs. 20,000/- on Monday;

ಎದುರುದಾರರು-1 ರವರಾದ ಬೇಲೂರು ಗ್ರಾಮಪಂಚಾಯತಿಯ ಪಂಚಾಯತಿ ಅಭಿವೃದ್ಧಿ ಅಧಿಕಾರಿಯಾದ ಶ್ರೀ ವಿಶ್ವನಾಥ್ ಡಿ.ಅನ್ನೇರ, ಇವರು ದೂರುದಾರರಾದ ಶ್ರೀ ಕೊಟ್ರೇಶ್ ಕುದ್ರಿಹಾಳ, ಇವರಿಂದ ರೂ. 20,000/-ಗಳ ಲಂಚವನ್ನು ದಿನಾಂಕ: 22.09.2014 ರಂದು ಸಂಜೆ ಸುಮಾರು 7.00 ಗಂಟೆಗೆ ಸ್ವೀಕರಿಸಿ ಈ ಮೊತ್ತದಲ್ಲಿ ರೂ. 6,500/-ಗಳನ್ನು ತೆಗೆದುಕೊಂಡು ಇನ್ನುಳಿದ ಮೊತ್ತ ರೂ. 13,500/-ಗಳನ್ನು ಎರಡನೇ ಎದುರುದಾರರಾದ ರಾಣೆಬೆನ್ನೂರು ತಾಲ್ಲೂಕು ಪಂಚಾಯತ್‌ನ ಕಾರ್ಯನಿರ್ವಾಹಕ ಅಧಿಕಾರಿಯಾದ ಶ್ರೀ ಕೃಷ್ಣಮೂರ್ತಿ, ಇವರ ನಿರ್ದೇಶನದಂತೆ, ಅವರಿಗೆ ನೀಡಲು ಅವರ ಕೊಠಡಿಯ ಕಾರ್ಡ್‌ಬೋರ್ಡ್ ಬಾಕ್ಸ್ ಬಳಿಯಿಟ್ಟಿದ್ದು, ಈ ಸಮಯದಲ್ಲಿ ಮೊದಲನೇ ಎದುರುದಾರರನ್ನು ಸೆರೆಯಿಡಿಯಲಾಗಿದ್ದು, (Traped) ಈ ಮೊತ್ತವನ್ನು ಮೊದಲನೇ ಎದುರುದಾರರು ತಮ್ಮ ಸ್ವಂತಕ್ಕಾಗಿ ಹಾಗೂ ಎರಡನೇ ಎದುರುದಾರರಿಗಾಗಿ ದೂರುದಾರರಿಂದ ಪಡೆದಿದ್ದು, ಸದರಿ ಮೊತ್ತವನ್ನು ಮುಟ್ಟುಗೋಲು ಹಾಕಿಕೊಂಡಿದ್ದು, ಈ ಮೊತ್ತವನ್ನು ಸ್ವೀಕರಿಸಿರುವುದಕ್ಕೆ ಹಾಗೂ ಅವರ ಬಳಿ ಇದ್ದುದ್ದಕ್ಕೆ ಸಮಂಜಸಕಾರವಾದ ಉತ್ತರವನ್ನು ಎದುರುದಾರರುಗಳು ನೀಡದೇ ಇರುವುದರಿಂದ, ಹಾಗೂ ವಿಚಾರಣಾಧಿಕಾರಿಯು ಗಮನಿಸಿರುವ ದಾಖಲಾತಿಗಳಿಂದ ಸಾಕ್ಷಿಗಳ ಹೇಳಿಕೆಗಳು ಮತ್ತು ಧ್ವನಿ ಮುದ್ರಕದಿಂದ, ಎದುರುದಾರರುಗಳು ಸರ್ಕಾರಿ ನೌಕರರಾಗಿ, ಪರಿಪೂರ್ಣ ಪ್ರಾಮಾಣಿಕತೆ, ಸಂಪೂರ್ಣ ಕರ್ತವ್ಯ ನಿಷ್ಠೆ ಮತ್ತು ಸರ್ಕಾರಿ ಸೇವೆಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡು ದುರ್ವರ್ತನೆ/ದುರ್ನಡತೆ ಎಸಗಿರುವುದು ಮೇಲ್ನೋಟಕ್ಕೆ ಕಂಡು ಬಂದಿರುವುದರಿಂದ, ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಾವಳಿಗಳು 1966ರ ನಿಯಮ 3(i)(ii) (iii)ರನ್ನು ಉಲ್ಲಂಘಿಸಿರುವುದರಿಂದ, ಸದರಿ ಅಧಿಕಾರಿ/ನೌಕರರ ವಿರುದ್ಧ ಇಲಾಖಾ ವಿಚಾರಣೆಯನ್ನು ಕೈಗೊಳ್ಳಲು ಪ್ರಕರಣವನ್ನು ತಮಗೆ ಕರ್ನಾಟಕ ನಾಗರೀಕ ಸೇವಾ (ವನಿಮೇ) ನಿಯಮಾವಳಿಗಳು 1957ರ ನಿಯಮ 14(ಎ) ರನ್ವಯ ವಹಿಸಿಕೊಡುವಂತೆ ಮಾನ್ಯ ಉಪಲೋಕಾಯುಕ್ತರು ರವರು ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 12(3) ರನ್ವಯ ಮಾಡಿರುವ ಶಿಫಾರಸ್ಸನ್ನು ಕಳುಹಿಸಿಕೊಡುತ್ತಾ, ಅಂತೆಯೇ ಕ್ರಮವಹಿಸುವಂತೆ ನಿಬಂಧಕರು, ರವರು ಕೋರಿರುತ್ತಾರೆ.

ಮಾನ್ಯ ಉಪಲೋಕಾಯುಕ್ತರ ವರದಿ ಹಾಗೂ ಅದರೊಂದಿಗಿನ ದಾಖಲಾತಿಗಳನ್ನು ಪರಿಶೀಲಿಸಲಾಗಿ, ಎದುರುದಾರರು ತಮ್ಮ ಕರ್ತವ್ಯ ನಿರ್ವಹಣೆಯಲ್ಲಿ ಲೋಪವೆಸಗಿರುವುದು ಕಂಡು ಬರುತ್ತದೆ. ಆದುದರಿಂದ, ಮಾನ್ಯ ಉಪಲೋಕಾಯುಕ್ತರು, ತಮ್ಮ ವರದಿಯಲ್ಲಿ ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ಕಲಂ 12(3) ರನ್ವಯ ಮಾಡಿರುವ ಶಿಫಾರಸ್ಸಿನಂತೆ, ಎದುರುದಾರರಾದ ಶ್ರೀ ಕೆ.ಕೃಷ್ಣಮೂರ್ತಿ, ಕಾರ್ಯನಿರ್ವಾಹಕ ಅಧಿಕಾರಿ ತಾಲ್ಲೂಕು ಪಂಚಾಯತ್ ರಾಣೆಬೆನ್ನೂರು, ಮತ್ತು ಶ್ರೀ ವಿಶ್ವನಾಥ್ ಡಿ. ಅನ್ನೇರ, ಪಂಚಾಯತ ಅಭಿವೃದ್ಧಿ ಅಧಿಕಾರಿ, ಬೇಲೂರು ಗ್ರಾಮ ಪಂಚಾಯತಿ,

ಇವರುಗಳ ವಿರುದ್ಧ ಕರ್ನಾಟಕ ನಾಗರೀಕ ಸೇವಾ (ವನಿಮೇ) ನಿಯಮಾವಳಿಗಳು 1957ರ ನಿಯಮ 11 ರನ್ವಯ ವಿವರವಾದ ಇಲಾಖಾ ವಿಚಾರಣೆಯನ್ನು ಜರುಗಿಸಲು ಅದೇ ನಿಯಮಾವಳಿಗಳ ನಿಯಮ 14(ಎ) ರನ್ವಯ, ಪ್ರಕರಣವನ್ನು ಮಾನ್ಯ ಉಪಲೋಕಾಯುಕ್ತರು-1, ಇವರಿಗೆ ವಹಿಸಲು ಸರ್ಕಾರವು ತೀರ್ಮಾನಿಸಿದೆ. ಆದುದರಿಂದ, ಈ ಕೆಳಕಂಡ ಆದೇಶ.

**ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 37 ವಿಸೇಬಿ 2017 ಬೆಂಗಳೂರು ದಿನಾಂಕ: 07-02-2017**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಮೇರೆಗೆ, ಶ್ರೀ ಕೆ.ಕೃಷ್ಣಮೂರ್ತಿ, ಕಾರ್ಯನಿರ್ವಾಹಕ ಅಧಿಕಾರಿ ತಾಲ್ಲೂಕು ಪಂಚಾಯತ್ ರಾಣೆಬೆನ್ನೂರು, ಮತ್ತು ಶ್ರೀ ವಿಶ್ವನಾಥ್ ಡಿ. ಅನ್ನೇರ, ಪಂಚಾಯತ ಅಭಿವೃದ್ಧಿ ಅಧಿಕಾರಿ, ಬೇಲೂರು ಗ್ರಾಮ ಪಂಚಾಯತಿ, ಇವರುಗಳ ವಿರುದ್ಧದ ಆರೋಪಗಳ ಸಂಬಂಧ ಕರ್ನಾಟಕ ನಾಗರೀಕ ಸೇವಾ (ವನಿಮೇ) ನಿಯಮಾವಳಿಗಳು 1957ರ ನಿಯಮ 11 ಮತ್ತು 11(ಎ) ರನ್ವಯ ಸಮಗ್ರವಾದ ಇಲಾಖಾ ವಿಚಾರಣೆಯನ್ನು ನಡೆಸಲು ಪ್ರಕರಣವನ್ನು ಅದೇ ನಿಯಮಾವಳಿಗಳ ನಿಯಮ-14(ಎ)ರ ಪ್ರಕಾರ ಮಾನ್ಯ ಉಪಲೋಕಾಯುಕ್ತರು-1, ಕರ್ನಾಟಕ ಲೋಕಾಯುಕ್ತ ರವರಿಗೆ ವಹಿಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು
ಅವರ ಹೆಸರಿನಲ್ಲಿ

(ಎಸ್.ರಂಗನಗೌಡ) 07/02/2017
ಸರ್ಕಾರದ ಅಧೀನ ಕಾರ್ಯದರ್ಶಿ(ಸೇವೆಗಳು-ಬಿ&ಸಿ)
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

ಇವರಿಗೆ,

1) ಮಹಾಲೇಖಪಾಲರು, ಕರ್ನಾಟಕ ಬೆಂಗಳೂರು.
2) ಮಾನ್ಯ ಉಪಲೋಕಾಯುಕ್ತರು-1 ಕರ್ನಾಟಕ ಲೋಕಾಯುಕ್ತ, ಬೆಂಗಳೂರು
3) ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಜಿಲ್ಲಾ ಪಂಚಾಯತ್ ದಾವಣಗೆರೆ.
5) ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು-01

ಪ್ರತಿ ಮಾಹಿತಿಗಾಗಿ:

1) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನ ಸೌಧ, ಬೆಂಗಳೂರು
2) ಸರ್ಕಾರದ ಪ್ರಧಾನ ಕಾರ್ಯದರ್ಶಿ/ಪ್ರಧಾನ ಕಾರ್ಯದರ್ಶಿ (ಪಂ.ರಾಜ್)/ ಜಂಟಿ ಕಾರ್ಯದರ್ಶಿ (ಆಡಳಿತ-2) ರವರ ಆಪ್ತ ಶಾಖೆ, ಗ್ರಾಮೀಣಾಭಿವೃದ್ಧಿ ಮತ್ತು ಪಂ. ರಾಜ್ ಇಲಾಖೆ.
3) ಮೇಲ್ವಿಚಾರಕರು, ಗಣಕ ಕೋಶ, ಗ್ರಾಮೀಣಾಭಿವೃದ್ಧಿ ಮತ್ತು ಪಂ. ರಾಜ್ ಇಲಾಖೆ.
4) ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು.